ಪಾಪೂ ಮರೀ... ನೀನೂ ಬಾ... ಹತ್ರ ಬಾ...' ಗಂಗೆ ಅವನ ಮಾತಿನಂತೆ ಅವನನ್ನು ಎತ್ತಿ ಕೂರಿಸಿ, ಒಂದು ದಿಂಬನ್ನು ಅವನ ಬೆನ್ನಿಗೆ ಆಸರೆಯಾಗಿಟ್ಟು, ಪಾಪೂನ ಕೈಹಿಡಿದು ನಿಂತಳು.

ಪ್ರಸಾದನೆಂದ,

'ಗಂಗಾ... ನಾವಿಬ್ಬರೂ ತೋಟದಲ್ಲಿ ಮಾಡಿಕೊಂಡ ನಿರ್ಧಾರ ಈಗ ಹೇಳುವ ಸಮಯ ಬಂದಿದೆ...'

ಅವಳು ಅತೀವ ನೋವಿನಿಂದ ತಲೆಯಾಡಿಸಿ 'ನನಗೆ ತಿಳೀವಲ್ಲದುರಿ... ನೀವು ಪೆಹಲೆ ಗುಣವಾಗ್ರೀ... ಆಮ್ಯಾಲೆ ಎಲ್ಲಾ... ಹಾಂಗ ನೋಡದ್ರೆ ನಂಗೇ ಸಾವು ಬರಬೇಕ್ರಿ... ನನ್ನೊಂದಿಗೆ ಈ ಪೋರಿನೂ ಹೋಗಿ ಬಿಡಬೇಕ್ರೀ...' ಸೆರಗು ಕಣ್ಣಿಗೆ ಅಡ್ಡ ಇಟ್ಟು ಚೆನ್ನಾಗಿ ಕಣ್ಣೀರು ಕರೆದಳು. ಅವಳ ಧೈರ್ಯವೆಲ್ಲಾ ಪ್ರಸಾದನ ಈ ಪರಿಸ್ಥಿತಿಯಲ್ಲಿ ಆವಿಯಾಗಿಬಿಟ್ಟಿತ್ತು. ಅವಳ ಮಾತಿನ ಹಿಂದು ಮುಂದು ತಿಳಿಯದೆ ಮಿಕ ಮಿಕ ಅವಳ ಮುಖ ನೋಡಿದರು, ಭಟ್ಟರು ಇಲ್ಲಿ ಮಾತಾಡಿದ ಮೂವರ ಮಾತಿನಿಂದ ಹಿಂದೆ ಯಾವುದೊ ದೊಡ್ಡ ರಹಸ್ಯ ಅಡಗಿದೆ ಅನ್ನಿಸಿತು. ಅದರಿಂದ ಕುತೂಹಲ ತೋರುವ ಸಂದರ್ಭ ಇದಾಗಿರಲಿಲ್ಲವಾದ್ದರಿಂದ ಮಗನ ಕ್ಷೇಮ ಮುಖ್ಯ ಎಂದುಕೊಂಡು ಬಾಯಿಗೆ ಹೊಲಿಗೆ ಹಾಕಿಕೊಂಡು ಬಿಟ್ಟರು.

ಪ್ರಸಾದ ತನ್ನ ಪಕ್ಕಕ್ಕೇ ಗಂಗೆನ ಕರೆದು ಅವಳ ಭೂಜಕ್ಕೆ ಒರಗಿಕೊಂಡ, ಕೈ ಪಾಪೂನ ಹಿಡಿದಿತ್ತು.

'ಅಪ್ಪಾ...' ಎಂದು ತಂದೆಯನ್ನು ಕ್ಷೀಣವಾಗಿ ಕರೆದ...' ನಾನು ಒಳ್ಳೆಯವನೆಂದು ನೀವು ಮತ್ತೆ ಎಲ್ಲರೂ ಈಗಿನ ತನಕ ತಿಳಿದಿದ್ದಿರಿ... ಆದರೆ ನಾನು ಮೋಸಗಾರ... ನನ್ನ ಕೃತ್ಯದಿಂದ ನಾನು ಯಾವ ತೊಂದರೆಯನ್ನೂ ಅನುಭವಿಸಲಿಲ್ಲ. ಕೋರಿಕೆ ಒಳ್ಳೇತನ ನಡೆಸಿಕೊಂಡೇ ಹೋದೆ... ಆದರೆ ನನ್ನಿಂದ ಗಂಗ ಎಲ್ಲ ಕಷ್ಟಗಳನ್ನೂ ಕಂಡಳು. ಅವಹೇಳನಕ್ಕೆ ಗುರಿಯಾದಳು. ಆದರೂ ಒಬ್ಬರಿಗೂ ನನ್ನ ಬಗ್ಗೆ ಯಾವ ಕೆಟ್ಟ ಮಾತೂ ಆಡಿ ತೋರಿಸಲಿಲ್ಲ...! ನನಗೆ ಇದನ್ನು ತಡೆದುಕೊಳ್ಳಲಾಗಿಲ್ಲ...' ಎನ್ನುತ್ತಿರುವಾಗ ಗಂಗೆ ಬಿಕ್ಕಳಿಸುತ್ತಿದ್ದಳು. ಅವಳ ಕಣ್ಣು ಅದೇ ತಾನೆ ಬಂದ ಶಿವಣ್ಣನನ್ನು ನುಂಗುವಂತೆ ನೋಡಿತು. ಪ್ರಸಾದ ಅವಳನ್ನೇ ಅವಲಂಬಿಸಿಕೊಂಡಂತೆ ಆದಾಗ ಅವಳು ಆಸರೆ ಚೆನ್ನಾಗಿ ನೀಡಿ ಅವನ ಬೆನ್ನು ತಡವಿದಳು. ಪ್ರಸಾದನ ಮಾತುಗಳು ತಡೆ ತಡೆದು ಬರುತ್ತಲೇ ಇತ್ತು. ಅವನೀಗ ಶಿವಣ್ಣನ ಕಡೆ ದೃಷ್ಟಿ ಹರಿಸಿದ.

'ಶಿವಣ್ಣ... ಗಂಡಸರೇ ಹೀಗೆ...! ನನ್ನಂತೆ ಆದರೆ ಬೇರೆಯ ಮಾರ್ಗದಲ್ಲಿ ನೀನೂ ಗಂಗೆಗೆ ಅನ್ಯಾಯ ಮಾಡಿದ್ದೀಯ...! ಆದರೆ ನೀನೂ ಅಪರಾಧಕ್ಕೆ ಹೊರತಾಗಿ ಉಳಿದುಬಿಟ್ಟೆ. ಮಾನಸಿಕವಾಗಿ ನೀನವಳಿಗೆ ಬಾಳು ಬಣ್ಣಗೆಡಿಸಿದಿ... ದೇವರೇ ನಿನ್ನನ್ನು ಕ್ಷಮಿಸಬೇಕು...' ಶಿವಣ್ಣನಿಗೆ ತಲೆ ಎತ್ತಿ ನಿಲ್ಲಲಾಗಲಿಲ್ಲ. ಆತ್ಮಸಾಕ್ಷಿಯಿಂದ ಯಾರೂ ತಪ್ಪಿಸಿಕೊಳ್ಳಲಾರರು. ಅದು ಕೊರೆದೇ ಕೊರೆಯುತ್ತಿರುತ್ತದೆ. ಎಷ್ಟೇ ಹೊರಗೆ ಸುಳ್ಳು, ಕಪಟದಿಂದ ಬಚಾವು ಆದರೂ ಒಳೊಳಗೆ ಅದು ತನ್ನ ಕಾರ್ಯ ಮಾಡುತ್ತಲೇ ಉಳಿದಿರುತ್ತೆ. ಅದು ಕಾಣದ ಶಿಕ್ಷೆ ಒಳೊಳಗೆ ಕೊಡುತ್ತಲೇ ಕೊಡುತ್ತಿರುತ್ತದೆ. ಶಿವಣ್ಣ ಅದಕ್ಕೆ ಹೊರತಲ್ಲ. ಆದರೂ ಅದನ್ನು ಮೀರಿ ತನ್ನ ಮೋಸ ಏನೂ ಇಲ್ಲ ಎಂದು ಸುಮ್ಮನಿರುತ್ತಿದ್ದ. ಈ ದಿನ ಪ್ರಸಾದನ ಮಾತು, ಅವನ ಪರಿಸ್ಥಿತಿ ಗ್ರಹಿಸಿ ತಾನು ಗಂಗೆಗೆ ಅನ್ಯಾಯ ಮಾಡಿದ್ದೆ ಎಂಬುದನ್ನು ಒಪ್ಪಿಕೊಳ್ಳಲು ಸಿದ್ಧನಾಗುತ್ತಿದ್ದ.

ಪ್ರಸಾದ ಈಗ ತನ್ನ ಗಮನವನ್ನೆಲ್ಲಾ ಆ ಪುಟ್ಟ ಹುಡುಗಿ ಮೇಲೆ ಇರಿಸಿದ. 'ಪಾಪೂ... ನನ್ನ ಪುಟ್ಟ ಮಗಳು ಪಾಪೂ... ಬಾಮ್ಮ...' ಎಂದು ಅವಳ ನೆತ್ತಿ ಮೇಲೊಂದು ಮುತ್ತಿನ ಮುದ್ರೆ ಒತ್ತಿದ. ಅವಳ ಕಣ್ಣಿನ ನೀರು ಅವನ ತುಟಿ ತೇವಗೊಳಿಸಿತು.

ಪ್ರಸಾದ ತಂದೆಗೆ ಹೇಳಿದ, 'ಅಪ್ಪಾ... ನೀ... ನೀರು....'

ದುಃಖ ಹೊರ ಹಾಕಲಾರದಷ್ಟು ಆಘಾತಕ್ಕೆ ಒಳಗಾಗಿದ್ದ ಭಟ್ಟರು.

ಪ್ರಸಾದನ ಅಂತ್ಯ ಇದೇ ಎಂದು ಊಹಿಸಿ ದುಃಖದಲ್ಲೂ ಕರ್ತವ್ಯ ಕಡೆಗಣಿಸದೆ, ದೇವರ ಮನೆಗೆ ಹೋಗಿ ಗಂಗೆ ತೀರ್ಥದ ಪುಟ್ಟ ಚೊಂಬನ್ನು ಒಡೆದು, ಮಗನ ಬಾಯಿಗೆ ತೀರ್ಥಬಿಟ್ಟರು. ನೀರು ಒಂದು ಉದ್ಧರಣೆ ಮಾತ್ರ ಬಾಯೊಳಗೆ ಇಳಿಯಿತಷ್ಟೆ...

ಪ್ರಸಾದ ಕಣ್ಣು ಮುಚ್ಚಿಯಾಯಿತು. ದೇಹ ನಿಷ್ಕ್ರಿಯವಾಯಿತು.

ಊರಿಗೆ ಊರೇ ಬಂದು ಭಟ್ಟರ ಮನೆ ಬಳಿ ನೆರೆದುಕೊಂಡಿತು. ಎಲ್ಲರಿಗೂ



## ಇಲ್ಲಿಯವರೆಗೆ

ಪ್ರಸಾದಪ್ಪನನ್ನು ಭೇಟಿ ಮಾಡಿದ ಗಂಗಾಗೆ ಜೀವನದಲ್ಲಿ ಹೊಸ ಭರವಸೆ ಸಿಕ್ಕಿದ ಹಾಗಾಗುತ್ತದೆ. ಆತನೊಂದಿಗೆ ಹೊಸ ಜೀವನ ಆರಂಭಿಸುವ ಇಂಗಿತ ವ್ಯಕ್ತಪಡಿಸಿ ಮೈಸೂರು ಬಿಟ್ಟು ಬೆಂಗಳೂರಿಗೆ ಬರುವ ನಿರ್ಧಾರ ಕೈಗೊಳ್ಳುತ್ತಾರೆ. ಈ ಮಧ್ಯೆ ಮೈಸೂರು ದಸರಾ ಸಂಭ್ರಮದಲ್ಲಿ ಬೀಗುತ್ತಿರುತ್ತದೆ. ಗಂಗಾ ಮಗಳನ್ನು ಕರೆದುಕೊಂಡು ಹೋಗಿ ದಸರಾ ವೈಭವ ತೋರಿಸುತ್ತಾಳೆ. ಮಗಳಿಗೆ ಇಷ್ಟವಾದ ಕಾಟನ್‌ಕ್ಯಾಂಡಿ, ಮಿರ್ಚಿ ಬೋಂಡಾ ಕೊಡಿಸಿ ಖುಷಿ ಪಡಿಸುತ್ತಾಳೆ.

ವಿಸ್ಮಯ ಕೊಟ್ಟು ಹೋಗಿಬಿಟ್ಟಿದ್ದ ಪ್ರಸಾದ. ಜನ ಅವನ ಬಗ್ಗೆ ದಿಗ್ಭ್ರಮೆ ಗೊಂಡಿದ್ದರು.

ದೇಹಕ್ಕೆ ಸಂಸ್ಕಾರ ಮಾಡಿ ಮುಗಿಸಲು ಹೊರಟಾಗ, ಅವನ ಎದೆ ಭಾಗ ಮೊದಲ ಬಾರಿಗೆ ಬಯಲಾಯಿತು. ಅಲ್ಲಿತ್ತು, ಅವನು ತಾನಾಗೇ ಬರೆ ಎಳೆದುಕೊಂಡು ಹಚ್ಚೆಯಂತಹ ಕಪ್ಪನೆ ಕಲೆಯ ಗುರುತು ಮಾಡಿಕೊಂಡದ್ದು. ಹಿಂದೆ ಒಂದು ದಿನ ಬಚ್ಚಲೊಲೆಯಲ್ಲಿ ಕಬ್ಬಿಣದ ತಂತಿ ಕಾಯಿಸಿ ಎದೆಯ ಮೇಲೆ ಮೂಡಿಸಿಕೊಂಡಿದ್ದ ಎರಡಕ್ಷರಗಳವು 'ಪಾಪು!' ಅವನ ಉಸಿರಿರುವ ತನಕ ಮುಚ್ಚಿಟ್ಟುಕೊಂಡಿದ್ದ ಅಕ್ಷರದ ಗುರುತಿನ ಕಲೆ! ಈಗ ಸಾರ್ವಜನಿಕರ ಕಣ್ಣು ಅದರ ಮೇಲೆ ವಿಸ್ಮಯದಿಂದ ನೆಲೆಸಿ ಬಿಟ್ಟವು.

ಆ ಎರಡಕ್ಷರದ ಸುಟ್ಟ ಕಲೆ ಬರುಬಹುದಾದಂತಹ ಪೀಳಿಗೆಯ ಬದಲಾವಣೆ ಸೂಚಿಸಿತು. ಅವನು ಮುಚ್ಚಿಟ್ಟುಕೊಂಡು ನರಳಿದ ದಿನಗಳು ಅಲ್ಲಲ್ಲಿ ಕೆಲವರಲ್ಲಾದರೂ ನಳಿಸಿ, ಯುವಜನ ಈಚೆ ಬರುವ ದಿಟ್ಟತನದ ಕಾಲ ಬರುವ ಸೂಚಿ ಅದಾಯಿತು. ಜಗತ್ತಿನ ಸಂಸ್ಕಾರ, ಸಂಸ್ಕೃತಿಗಳು ಬದಲಾಗಿ, ಜಗತ್ತು ಕಿರಿದಾಗಿರುವುದನ್ನು ಕಾಣುವ ಕಾಲ ಸನಿಹವಾಯಿತು.

* * *

ಹತ್ತೆಂಟು, ಹದಿನೈದು ವರ್ಷಗಳಾಚೆ ಇಂದ್ರಾ ಗಾಂಧಿ ಈಗ ಸ್ನಾತಕೋತ್ತರ ಪದವೀಧರಳು. ಸುನಂದ ಬನ್ನಪ್ಪನವರಿಂದಾಗಿ ಗಂಗೆ ಕರಕುಶಲ ಸಂಸ್ಥೆಯಲ್ಲಿ ಕಸೂತಿ ವಿಭಾಗದ ನುರಿತ ಮೇಲ್ವಿಚಾರಿಕೆಯಾಗಿ, 'ಪಾಪೂ' ಜೊತೆ ಬಾಳ್ವೆ ನಡೆಸುತ್ತಿದ್ದಾಳೆ. ಅಂದು, ಪ್ರಸಾದನ ಕೊನೆಯ ದರ್ಶನ ಪಡೆದು ತನ್ನೂರಿಗೆ ಮರಳಿ ಬಿಟ್ಟಿದ್ದ ಶಿವಣ್ಣ ತನ್ನ ಆಸ್ತಿ ಮಾರಿ ಗಂಗೆ ಹೆಸರಿಗೆ ಹಣ ಬರೆದಿಟ್ಟಿದ್ದಾನಂತೆ. ಅದು ಹೌದೊ, ಅಲ್ಲವೊ.. ಅದು ಮುಖ್ಯ ಅಲ್ಲ. ಅವನ ಹಣಕ್ಕಾಗಿ ಗಂಗೆ ಬಾಯ್ತೆರೆದು ಕುಳಿತೂ ಇಲ್ಲ. ಅವಳಿಗದು ಬೇಕೂ ಇಲ್ಲ.

ಈಗ ಹೊಸ ಸಮಾಜದಲ್ಲಿ ಅವಳಿದ್ದು, ಮಗಳಿಗೆ ಎಲ್ಲ ಸ್ವಾತಂತ್ರ ಕೊಟ್ಟಿದ್ದಾಳೆ. ಮದುವೆಯನ್ನೂ ಒಂದು ಬಂಧನ ಮಾಡಿಲ್ಲ. ಸುಶಿಕ್ಷಿತ ಮಗಳು ಸರಿಯಾದವನನ್ನೇ ಆರಿಸಿಕೊಳ್ಳುವಳೆಂಬ ನಂಬಿಕೆ ಗಂಗೆಗೆ ಇದೆ.

ಹೊಸ ರೀತಿ ಜಗತ್ತು ಈಗ!

ಜಗತ್ತೇ ಯುವ ಪೀಳಿಗೆಗಾಗಿ ಮುಂದೆ ನಿಂತಿದೆ. ನಾವೆಲ್ಲ ನೋಡುತ್ತಲೇ ಇದೀವಿ ಅಲ್ಲವೆ?

(ಮುಗಿಯಿತು)